ವಿಶಿಷ್ಟ ಹದಸಾಧನೆಯದು. ಈ ವಿಶೇಷ ಶಬ್ದದ ಸತ್ವವನ್ನು ಸಾಹಿತ್ಯದಲ್ಲಿಯೂ ಸಾಧಿಸುವುದು ಹೇಗೆ? ಅದು ನನ್ನ ಮಟ್ಟಿಗಿದ್ದ ಸವಾಲು. ಸ್ವಂತದ ಹಲವು ಬಸುರು ಬಾಣಂತನ, ಮನೆಮಕ್ಕಳ ಬಸುರು ಬಾಣಂತನ, ಬದುಕಿನ ವ್ಯಂಗ್ಯ, ಟೀಕೆ–ಟಿಪ್ಪಣಿಗಳ ನಡುವೆ ನಿಷ್ಠುರ ಸತ್ಯಗಳಿಗೆ ಗಟ್ಟಿ ಅಂಟಿಕೊಂಡು ತನ್ನ ದನಿಯನ್ನೂ ಬಾಳಿನ ಬನಿಯನ್ನೂ ಉಳಿಸಿಕೊಂಡವಳು ಅವಳು. ಕೃಷಿಕ ಮನೆಯಿಂದ ಬಂದದ್ದರಿಂದಲೋ ಏನೊ ಆಕೆಗೆ ಕೆಲಸವೇ ವೇದ. ತಾಯಿಯಿಂದ ನಮಗೆ ಬಂದ ಬಳುವಳಿಗಳಲ್ಲಿ ಇದೂ ಒಂದು. ಕೆಲಸ ಮಾಡುವವರೆಂದರೆ ಅವಳಿಗೆ ಮೆಚ್ಚು. ನಮ್ಮನ್ನು ಮನೆಕೆಲಸದಲ್ಲಿ ನುರಿಸಿದವಳು ಅವಳು, ನುರಿವ ಎರಡರ್ಥದಲ್ಲಿಯೂ. ಪ್ರೀತಿಯೆಂದರೆ ಒಡಲು ಹರಿದೇ ಕೊಡುವಂಥವಳಾಗಿ, ವಕ್ರಗಳಿಗೆ ಎಂದಿಗೂ ತಲೆಬಾಗದವಳಾಗಿ, ಅಹಂಕಾರವೆಂಬುದನ್ನು ತನ್ನ ರಕ್ಷಣೆಗಾಗಿ ಬಳಸಿಕೊಂಡವಳು. ಸ್ವತಂತ್ರ ಮನಸ್ಸನ್ನು ಜೀವನದುದ್ದಕ್ಕೂ ಸಾಧಿಸಿ ಕಾಪಾಡಿಕೊಂಡು ಬಂದ ಅಪ್ಪಟ ವ್ಯಕ್ತಿತ್ವದವಳು. ಬೇಗ ಅರ್ಥವಾಗುವಂಥವಳೇ ಅಲ್ಲ. ಅವಳು ನನಗೆ ಅರ್ಥವಾದದ್ದೇ ನನ್ನೊಳಗಿನ 'ಸ್ತ್ರೀ' ಚಿಂತಿಸತೊಡಗಿದ ಮೇಲೆ. ಆಕೆ ನಿಜವಾಗಿಯೂ ಬರೆಯಬೇಕಿತ್ತು. ಅವಳ ಮಾತಿಗೆ ಅಂಥ ಛಾಪು ಇತ್ತು. ಶಕ್ತಿ, ನಾಡಿ ಶುದ್ಧತೆ, ಚಿಂತನೆ, ಪ್ರಖರ ವಿಮರ್ಶಾ ಪ್ರಜ್ಞೆ ಎಲ್ಲವೂ ಇದ್ದವು. ನಾನಾದರೂ ಇವತ್ತು ಏನು ಬರೆದೆನೋ ಅವೆಲ್ಲವೂ ಅವಳೇ ಬರೆಯಬಹುದಾದ್ದರ ನೂರರಲ್ಲಿ ಎರಡಂಶ ಅಷ್ಟೇ. ಅಲ್ಲಲ್ಲಿ ತಕ್ಕನಾದ ಶಬ್ದ ಕಟ್ಟುವ ಅವಳ ಸಹಜ ಕೌಶಲ ನನಗೆ ತಲೆಕೆಳಗೆ ಮಾಡಿ ನಿಂತರೂ ಬಾರದು. ಅವಳೊಡನೆ ಸುಖದುಃಖ ಹೇಳಿಕೊಳ್ಳಲು ಬರುವ ಮಹಿಳೆಯರೋ, ನನ್ನ ನೆನಪಿನ ಆಳದಲ್ಲಿ ಎಂದೂ ಕಳೆದು ಹೋಗದಂತೆ ಜೋಪಾನವಾಗಿದ್ದಾರೆ.

## ಭಾಷೆಯ ಸುಖ

ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳ ಜಟಾಪಟಿಯ ನಡುವೆ ಹೊಸ ಭಾಷೆ ಹೊಸ ಗಾದೆ ಥಟಥಟನೆ ಹುಟ್ಟುತ್ತಿದ್ದ ಅಂಥ ಕಾಲದಲ್ಲಿ ಜನಿಸಿದವರಿಗೆ ಭಾಷೆಗಂತೂ ಬರಗಾಲವಿರುವುದಿಲ್ಲವಷ್ಟೆ? ಭಾವವಿಲ್ಲದೆ ಭಾಷೆ ಹೇಗೆ ಹುಟ್ಟೀತು. ಆಯಾ ಭಾವ ತನ್ನ ಗಾಢತೆಗೆ ಮತ್ತು ತಂತನ್ನ ಪ್ರಾದೇಶಿಕತೆಗೆ ತಕ್ಕನಾಗಿ ತಾನೇ ಭಾಷೆಯನ್ನು ಸೃಷ್ಟಿಸಿಕೊಳ್ಳುತ್ತದೆ. ಭಾಷಾ ವೈವಿಧ್ಯದ ಹಿಂದಿನ ಗುಟ್ಟೇ ಅದು ತಾನೆ? ಹಾಗೆ ನನ್ನಲ್ಲಿ ಅವೆರಡರ ಕೃಷಿ ನಡೆಯಿತು ಎನ್ನುವುದಕ್ಕಿಂತ ನಡೆಯಲ್ಪಟ್ಟಿತು ಎನ್ನುವುದೇ ಹೆಚ್ಚು ಸೂಕ್ತ. ಕರ್ನಾಟಕದಲ್ಲಿ ಕುಂದಾಪುರ ತಾಲ್ಲೂಕು ತನ್ನದೇ ಅದ ವಿಶಿಷ್ಟ ಕನ್ನಡವೊಂದನ್ನು ಬೆಳೆಸಿಕೊಂಡಿದೆ. ಪ್ರಾಯಶಃ ತನ್ನ ವಿಶೇಷ ಸಂವೇದನಾ ಕ್ರಮಕ್ಕೆ ತಕ್ಕಂತೆ ರೂಪುಗೊಳಿಸಿಕೊಂಡ ಉಪಭಾಷೆ ಇರಬೇಕು. ಮಾತಿನಲ್ಲೆ ಅಭಿನಯದ ಛಾಪು. ಸಂಕ್ಷಿಪ್ತತೆ, ವ್ಯಂಗ್ಯ ವಿಡಂಬನೆ ನವಿರು ಹಾಸ್ಯ ಹಾಸು ಹೊಕ್ಕ, ವ್ಯಕ್ತಿತ್ವಕ್ಕೆ ಸರಿಯಾಗಿ ಬಿಸುಪು ಪಡೆಯುವ ಭಾಷೆ ಅದು. ಅದರ ನಡುವೆಯೇ ಅದನ್ನು ಆಡಿಕೊಂಡೇ ಬೆಳೆದ ನನಗೆ ಅವಶ್ಯ ಕಂಡಾಗೆಲ್ಲ ಆ ಭಾಷೆ ತಾನಾಗಿ ಭಾವವನ್ನು ಅನುಸರಿಸಿ ಬರುತ್ತ ಅಪಾರವಾಗಿ ನೆರವಾಯಿತು. 'ಅಕ್ಕು'ವಿಗೆ ಅದೇ ಬೇಕಾಯಿತು. ಆದರೆ 'ಶಕುಂತಲೆ' ಕಾವ್ಯ ಭಾಷೆಯನ್ನು ಆರಿಸಿಕೊಂಡಳು. ಇಲ್ಲವಾದರೆ ಬರೆವಾಗ ಅವರು ಕಣ್ಣಮುಂದೆ ಕಟ್ಟಲಾರರಲ್ಲ.

## ಕುರ್ಚಿ ಮೇಲೆ ಕುಳಿತು ಹೂಸು ಬಿಡುತ್ತಾಳಂತೆ?

ನಾನು ಹುಟ್ಟಿದ ಕಾಲದ ಮಹಿಳೆಯರ ಸ್ಥಿತಿಗತಿ ಅಂದಿನ ಎಲ್ಲಾ ಮಹಿಳೆಯರ ಸ್ಥಿತಿಗತಿಯೇ